ಓ ಎಸ್ ನಂಃ 586-14
ಡಿ ಡಬ್ಲ್ಯೂ ಃ 1

**ದಿಃ 01-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಂದುವರೆದ **ಪಾಟೀ ಸವಾಲುಃ** ವಾದಿ ಪರ ಶ್ರೀ ಎನ್ ಎಸ್ ಎಸ್ **ವಕೀಲರಿಂದ**

53. ನನ್ನ ತಾತನ ಹೆಸರು ಜಗಲಿ ನಾರಾಯಣಪ್ಪ ಆಗಿರುತ್ತದೆ. ದಿನಾಂಕಃ 08-02-1980 ರ ಪಾಲು ಪಾರೀಖತ್ ನಲ್ಲಿ ಜಗಲಿ ನಾರಾಯಣಪ್ಪ ಮತ್ತು ಅವರ ಮಕ್ಕಳ ಮದ್ಯೆ ಆಗಿರುವ ವಿಭಾಗದ ಮೂಲಕ ದಾವಾ ಸ್ವತ್ತುಗಳು ನನ್ನ ತಂದೆಗೆ ಬಂದಿರುತ್ತದೆ ಎಂದು ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಅದು ಎಷ್ಟು ಜನರ ಮದ್ಯೆ ಆಗಿರುತ್ತದೆ ಎಂದು ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. 1980 ರ ಪಾಲು ಪಟ್ಟಿ ಮುಖಾಂತರ ಬಂದಿರುವ ಕೆಲವು ಆಸ್ತಿಗಳನ್ನು ನಾನು ಮತ್ತು ನನ್ನ ತಂದೆ ಜಂಟಿಯಾಗಿ ಮಾರಾಟ ಮಾಡಿರುವುದಕ್ಕೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಕೊಟ್ಟು ಅವುಗಳನ್ನು ಈಗಾಗಲೇ ಗುರುತಿಸಲಾಗಿರುತ್ತದೆ ಎಂದರೆ ಸರಿ. 1980 ರ ಪಾಲುಪಟ್ಟಿಯಲ್ಲಿ ನನ್ನ ತಂದೆ ರಾಮಯ್ಯರವರ ಪಾಲಿಗೆ ಬಂದಿರುವ ಕೆಲವು ಆಸ್ತಿಗಳನ್ನು ಮಾತ್ರ ಮಾರಾಟ ಮಾಡಿರುವುದಾಗಿ ನಾವು ಸದರಿ ದಾಖಲೆಗಳಲ್ಲಿ ಹೇಳಿರುತ್ತೇವೆ ಎಂದರೆ ಸರಿ. 1980 ರ ವಿಭಾಗ ಪತ್ರದಲ್ಲಿ ಬಂದಿರುವ ಇನ್ನು ಕೆಲವು ಆಸ್ತಿಗಳು ಮಾರಾಟ ಮಾಡದೇ ಉಳಿದಿರುತ್ತದೆ ಎಂದರೆ ಸರಿ.

54. 1980 ರ ಪಾಲುಪಟ್ಟಿಯ ಬಗ್ಗೆ ಎಲ್ಲಾ ದಾಖಲಾತಿಗಳಲ್ಲೂ ನಾನು ಮತ್ತು ನನ್ನ ತಂದೆ ಹೇಳಿದ್ದು ಸದರಿ 1980 ರ ಪಾಲುಪಟ್ಟಿಯಲ್ಲಿ ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಸದರಿ ಕಾರಣ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. (ಸಾಕ್ಷಿಯು ಸದರಿ ಪ್ರಶ್ನೆಗೆ ಉತ್ತರಿಸಲು ತಡವಡಿಸಿರುತ್ತಾರೆ).

55. ನಿಡಿ 16 ರ ವಿಭಾಗ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ವಿಭಾಗ ಪತ್ರದಲ್ಲಿ "ತಾರೀಖು 05-02-1980..... ಪಾವತಿಸಿಕೊಂಡು ಬರುತ್ತಿರುವುದು ಸರಿಯಷ್ಟೆ" ಎಂದು ಇರುತ್ತದೆ ಎಂದರೆ ಸರಿ.

56. ನನ್ನನ್ನು ನನ್ನ ತಂದೆಯವರು ಮನೆಯಿಂದ ಆಚೆಗೆ ದಿನಾಂಕಃ 21-12-2004 ರಂದು ಹಾಕಿರುತ್ತಾರೆ. ನನ್ನ ಹೆಂಡತಿಗೂ ನನ್ನ ತಾಯಿಗೂ (ಅತ್ತೆ ಸೊಸೆ) ಸರಿಹೋಗದೇ ಇರುವ ಕಾರಣ ನನ್ನ ತಂದೆ ನನ್ನನ್ನು ಮನೆಯಿಂದ ಹೊರಗೆ ಹೋಗಲು ಹೇಳಿದ್ದರು. ನನ್ನ ತಂದೆಯೇ ನನ್ನನ್ನು ಮನೆಯಿಂದ ಹೊರಗೆ ಹೋಗಿ ಬೇರೆ ಕಡೆ ವಾಸ ಮಾಡಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಮತ್ತು

ನನ್ನ ಹೆಂಡತಿ ಇಬ್ಬರೇ ಇದ್ದು ನಮಗೆ ಮಕ್ಕಳು ಇರಲಿಲ್ಲ. ಆ ಸಮಯದಲ್ಲಿ ನನ್ನ ಆರು ಜನ ಸಹೋದರಿಯರಿಗೂ ಮದುವೆಯಾಗಿತ್ತು. ಆ ಸಮಯದಲ್ಲಿ ನನ್ನದೇ ಆದ ವಾಸದ ಮನೆ ನನಗೆ ಇರಲಿಲ್ಲ. ನನ್ನ ತಂದೆ ವಾಸವಿದ್ದ ಮನೆ ಅವರೇ ಕಟ್ಟಿದ ಮನೆಯಾಗಿರುತ್ತದೆ. ನನ್ನ ತಂದೆ ವಾಸವಿದ್ದ ಮನೆ ಬಿಟ್ಟರೆ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ವಾಸದ ಮನೆ ಇರಲಿಲ್ಲ. ನನ್ನ ತಂದೆ ಕಟ್ಟಿರುವ ಮನೆ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಮನೆಯಲ್ಲಿ ನನ್ನ ತಂದೆ, ನಮ್ಮ ಕುಟುಂಬದ ಎಲ್ಲಾ ಸದಸ್ಯರು ಅಂದರೆ ನಾನು ಮತ್ತು ನನ್ನ ಸಹೋದರಿಯರು ಉಳಿದುಕೊಳ್ಳುವ ಸ್ವತ್ತಾಗಿತ್ತು ಎಂದರೆ ಸರಿ.

57. ನಾನು ನನ್ನ ತಂದೆ ವಾಸಮಾಡುತ್ತಿದ್ದ ಮನೆಯ ಮೇಲೆ ಒಂದು ಮನೆ ಕಟ್ಟಿರುತ್ತೇನೆ. ನಾನು ನನ್ನದೇ ಆದ ಯಾವುದೇ ನಿವೇಶನ ಅಥವಾ ಜಾಗದಲ್ಲಿ ಯಾವುದೇ ಮನೆಯನ್ನು ಕಟ್ಟಿರುವುದಿಲ್ಲ. ನಾನು ನನ್ನ ತಂದೆ ವಾಸವಿದ್ದ ಮನೆಯ ಮೇಲೆ ಮನೆ ಕಟ್ಟಲು ಪರವಾನಿಗೆಯನ್ನು ನನ್ನ ತಂದೆಯ ಹೆಸರಿನಲ್ಲಿ ಪಡೆದಿರುತ್ತೇನೆ. ಸದರಿ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಸದರಿ ದಾಖಲಾತಿಯನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಜಾಗದಲ್ಲಿ 22 ಚದರದ ಮನೆಯನ್ನು ಕಟ್ಟಿರುತ್ತೇನೆ. ಸದರಿ 22 ಚದರದ ಮನೆಯನ್ನು ಕಟ್ಟಲು ನನಗೆ ರೂ.55 ಲಕ್ಷಗಳ ವೆಚ್ಚವಾಗಿರುತ್ತದೆ. ಸದರಿ ರೂ.55 ಲಕ್ಷ ನನ್ನ ಒಟ್ಟು ಕುಟುಂಬದ ಹಣವಾಗಿತ್ತು ಎಂದರೆ ಸುಳ್ಳು. ಹೊಸದಾಗಿ ಕಟ್ಟಿರುವ ಗೃಹಪ್ರವೇಶದ ಆಮಂತ್ರಣ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸದೇ ಇರುವ ಕಾರಣ ಸದರಿ ಆಮಂತ್ರಣ ಪತ್ರದಲ್ಲಿ ನನ್ನ ತಂದೆಯ ಹೆಸರು ಬಂದಿರಬಹುದು ಮತ್ತು ಮನೆ ಕಟ್ಟಿರುವ ದಿನಾಂಕ ನ್ಯಾಯಾಲಯಕ್ಕೆ ತಿಳಿಯಬಹುದು ಎನ್ನುವ ಕಾರಣಕ್ಕೆ ಎಂದರೆ ಸಾಕ್ಷಿಯು ನನ್ನ ಮನೆಯ ಗೃಹಪ್ರವೇಶ ದಿನಾಂಕಃ 27-05-2012 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸದರಿ ಮನೆಯ ಕಟ್ಟಡವನ್ನು ಕಟ್ಟಲು 2010 ರಲ್ಲಿ ಪ್ರಾರಂಭ ಮಾಡಿರುತ್ತೇನೆ. ನಾನು ಈ ದಿನ ಪಾಟೀ ಸವಾಲಿನಲ್ಲಿ ಹೇಳಿರುವ ವಿಚಾರಗಳನ್ನು ನನ್ನ ಲಿಖಿತ ಹೇಳಿಕೆ ಮತ್ತು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. 2010 ರಲ್ಲಿ ಮನೆ ಕಟ್ಟಲು ಪ್ರಾರಂಭಿಸಲು ನನಗೆ ನಮ್ಮ ಕುಟುಂಬದ ಸಹೋದರಿಯರು ಒಪ್ಪಿಗೆ ನೀಡಿರುವ ಯಾವುದೇ ಪತ್ರಗಳು ನ್ಯಾಯಾಲಯಕ್ಕೆ ನಾನು ನೀಡಿರುವುದಿಲ್ಲ ಮತ್ತು ನನ್ನ ಹತ್ತಿರ ಆ ರೀತಿಯ ಪತ್ರಗಳು ಇರುವುದಿಲ್ಲ. 2011 ರಲ್ಲಿ ಆಗಿರುವ ವಿಭಾಗ ಪತ್ರದಲ್ಲಿ (ನಿಡಿ16) ಒಂದು ವೇಳೆ ನಾನು ಸ್ವಂತ ಮನೆ ಕಟ್ಟಲು 2010 ರಲ್ಲಿ ಪ್ರಾರಂಭಿಸಿದ್ದರೆ ಅದರ ಬಗ್ಗೆ ನನಗೆ ನಿಡಿ 16 ರಲ್ಲಿ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

58. ನಿಡಿ 16 ರಲ್ಲಿ ತೋರಿಸಲಾಗಿರುವ ಎ ಷೆಡ್ಯೂಲ್ ಸ್ವತ್ತು ನನಗೆ ಮತ್ತು ನನ್ನ ತಂದೆಗೆ ಜಂಟಿಯಾಗಿ ಬಂದಿರುತ್ತದೆ. ಸದರಿ ಎ ಷೆಡ್ಯೂಲ್‌ನಲ್ಲಿ ಐಟಂ ನಂಬರ್ 1 ರಲ್ಲಿ ಸರ್ವೆ ನಂ 118/1 ರಲ್ಲಿ 6 ಗುಂಟೆ, ಸರ್ವೆ ನಂ 118/2 ರಲ್ಲಿ 6 ಗುಂಟೆ, ಐಟಂ ನಂ.2 ರಲ್ಲಿ ಸರ್ವೆ ನಂ 70 ರಲ್ಲಿ 2 ಎಕರೆ 15 ಗುಂಟೆ, ಐಟಂ

ನಂ.3 ರಲ್ಲಿ ಸರ್ವೆ ನಂ 64 ರಲ್ಲಿ 14 ಗುಂಟೆ, ಐಟಂ ನಂ 4 ರಲ್ಲಿ ಸರ್ವೆ ನಂ 78/1 ರಲ್ಲಿ 7 ಗುಂಟೆ ಜಮೀನು ನನ್ನ ಮತ್ತು ನನ್ನ ತಂದೆಗೆ ಬಂದಿರುತ್ತದೆ. ಅದೇ ರೀತಿ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿ 5 ರವರಿಗೆ ಬಂದಿದ್ದು ಅವರಿಗೆ ಸರ್ವೆ ನಂ 70 ರಲ್ಲಿ 4 ಗುಂಟೆ ನೀಡಲಾಗಿರುತ್ತದೆ. ಪ್ರತಿವಾದಿ 6 ರವರಿಗೆ ಸಿ ಷೆಡ್ಯೂಲ್ ಸ್ವತ್ತಿನಲ್ಲಿ ಸರ್ವೆ ನಂ 70 ರಲ್ಲಿ 4 ಗುಂಟೆ ನೀಡಲಾಗಿರುತ್ತದೆ. ಪ್ರತಿವಾದಿ 7 ರವರಿಗೆ ಡಿ ಷೆಡ್ಯೂಲ್ ಸ್ವತ್ತಿನಲ್ಲಿ ಸರ್ವೆ ನಂ 70 ರಲ್ಲಿ 4 ಗುಂಟೆ ಜಮೀನನ್ನು ನೀಡಲಾಗಿರುತ್ತದೆ. ಪ್ರತಿವಾದಿ 3 ಮತ್ತು ದಿವಂಗತ ಪ್ರತಿವಾದಿ 4 ರವರಾದ ನನ್ನ ಮೃತ ಸಹೋದರಿ ಶಾರದಮ್ಮರವರ ಮಕ್ಕಳಿಗೆ ಇ ಷೆಡ್ಯೂಲ್ ಸ್ವತ್ತಿನಲ್ಲಿ ಸರ್ವೆ ನಂ 70 ರಲ್ಲಿ 6 ಗುಂಟೆ ಜಮೀನು ನೀಡಲಾಗಿರುತ್ತದೆ.

59. ಸರ್ವೆ ನಂ 70 ರಲ್ಲಿ ನಾನು ಮತ್ತು ನನ್ನ ತಂದೆ ನಿಡಿ 16 ರ ಪ್ರಕಾರ 2 ಎಕರೆ 15 ಗುಂಟೆ ಜಮೀನು ಇಟ್ಟುಕೊಂಡು ಬೇರೆ ವಾರಸುದಾರರಿಗೆ ಯಾಕೆ ಕಡಿಮೆ ಆಸ್ತಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ನಾನು ತಕರಾರು ಮಾಡಿದ್ದರು ನನ್ನ ತಂದೆಯವರೇ ಸದರಿ ಆಸ್ತಿಯನ್ನು ಬೇರೆ ವಾರಸುದಾರರಿಗೆ ಕಡಿಮೆ ಪಾಲಾಗಿ ಹಂಚಿಕೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

60. ಈ ದಿನ ನ್ಯಾಯಾಲಯದ ಮುಂದೆ ವಾದಿಗಳಾದ 1 ಮತ್ತು 2 ರವರು ಇದ್ದು ಅವರು ನನ್ನ ಖಾಸಾ ಅಕ್ಕ ಮತ್ತು ತಂಗಿಯರು ಆಗಿರುತ್ತಾರೆ. ನನ್ನ ಲಿಖಿತ ಹೇಳಿಕೆಯ 3 ನೇ ಪುಟದ 1 ನೇ ಖಂಡಿಕೆಯಲ್ಲಿ ದಿನಾಂಕಃ 04-05-2011 ರ ವಿಭಾಗಕ್ಕೆ ವಾದಿಗಳು ಯಾವ ಕಾರಣಕ್ಕೆ ನಮ್ಮ ಜೊತೆ ಸೇರಿರುವುದಿಲ್ಲ ಎನ್ನುವ ಕಾರಣ ನಮಗೆ ಗೊತ್ತಿರುವುದಿಲ್ಲ ಎಂದು ನಾನು ಹೇಳಿರುತ್ತೇನೆ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿ ಈ ಅಂಶವನ್ನು ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೇಳಿರುವ ಈ ಒಕ್ಕಣೆ ದಿನಾಂಕಃ 06-05-2011 ರ ನಿಡಿ 16 ವಿಭಾಗ ಪತ್ರದಲ್ಲಿ ಇರುವುದಿಲ್ಲ ಎಂದರೆ ಸರಿ. ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳುವ ಮುಂಚೆ ವಾದಿಗಳ ಹತ್ತಿರ ಅವರು ನಿಡಿ 16 ಕ್ಕೆ ಭಾಗಿದಾರರು ಯಾವ ಕಾರಣಕ್ಕೆ ಆಗಿರುವುದಿಲ್ಲ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ.

61. ನಾವು ವಿಭಾಗಪತ್ರದಲ್ಲಿ ಸೇರಿರುವುದಿಲ್ಲ ನಮಗೆ ಭಾಗ ಬಂದಿರುವುದಿಲ್ಲ ಎಂದು ವಾದಿಗಳು ದಾವೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದ ಬಗ್ಗೆ ನನ್ನ ಹೆಂಡತಿಯಾದ ಪ್ರತಿವಾದಿ 8 ರವರು ಎಲ್ಲಾ ವಿಷಯಗಳು ಗೊತ್ತಿರುತ್ತದೆ ಎನ್ನುವ ಹಾಗೆ ನನ್ನ ಜೊತೆ ಜಂಟಿ ಲಿಖಿತ ಹೇಳಿಕೆಯನ್ನು ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ವಾದಿಗಳು ದಾವೆಯಲ್ಲಿ ಪ್ರತಿವಾದಿ 8 ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಆದ್ದರಿಂದ ನಾನು ಅವರ ಜೊತೆ ಜಂಟಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ. ಪ್ರತಿವಾದಿ 8 ರವರು ನಮ್ಮ ಕುಟುಂಬದ ವಿಭಾಗ ಪತ್ರ ನಿಡಿ 16 ಮತ್ತು ನಮ್ಮ ಕುಟುಂಬದ ಇತರೆ ದಾಖಲಾತಿಗಳಿಗೆ ಪಕ್ಷಗಾರರಲ್ಲ.

62. ನಿಡಿ 18ರ ದಾನಪತ್ರದ ಪ್ರಕಾರ ನನ್ನ ಹೆಂಡತಿ ಪ್ರತಿವಾದಿ 8ರವರು ನನ್ನ ಮಗ ಪ್ರತಿವಾದಿ 9ರವರಿಗೆ ಮೈನರ್ ಗಾರ್ಡಿಯನ್ ಆಗಿದ್ದು ಅದರ ಸಂಬಂದ ಮಾತ್ರ ಪ್ರತಿವಾದಿ 8ರವರಿಗೆ ಮತ್ತು ಈ ದಾವೆಗೆ ಸಂಬಂದ ಇರುತ್ತದೆ ಎಂದರೆ ಸರಿ. ನನ್ನ ತಂದೆಯನ್ನು ಆಸ್ತಿಗಳ ವಿಷಯದಲ್ಲಿ ನನಗೂ ಮತ್ತು ನನ್ನ ಮಗನಿಗೂ ಅನುಕೂಲವಾಗುವಂತೆ ಪ್ರಚೋದನಕಾರಿಯಾಗಿ ನನ್ನ ತಂದೆಯನ್ನು ಉಪಯೋಗಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

63. ನಾನು ನನ್ನ ಲಿಖಿತ ಹೇಳಿಕೆಯ ಮೊದಲನೇ ಪುಟದಲ್ಲಿ ವಾದಿಗಳು ನಿಡಿ 16ರ ರದ್ದತಿಗಾಗಿ ಕೇಳಿರುತ್ತಾರೆ ಎಂದು ಪುಟ 1 ರಿಂದ 3ರಲ್ಲಿ ಹೇಳಿರುತ್ತೇನೆ. ವಾದಿಗಳು ನಿಡಿ 16 ಅವರಿಗೆ ಅನ್ವಯವಾಗುವುದಿಲ್ಲ ಅವರಿಗೆ 8 ಹಿಸ್ಸೆಗಳಲ್ಲಿ 2 ಹಿಸ್ಸೆ ಅವರಿಗೆ ಬರಬೇಕೆಂದು ಕೇಳಿರುತ್ತಾರೆ ಎಂದರೆ ಸರಿ.

64. ವಾದಿ 1984ರಲ್ಲಿ ಮದುವೆಯಾಗಿರುವುದಕ್ಕೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. 1984ರಲ್ಲಿ ಮದುವೆಯಾಗಿರುವುದು ಸರಿ ಆದರೆ ಅವರ ಮದುವೆ ಯಾವ ದಿನಾಂಕ ಮತ್ತು ತಿಂಗಳು ಆಗಿರುತ್ತದೆ ಎನ್ನುವ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿ 4ನೇ ಪುಟದಲ್ಲಿ ನಾನು ಹೇಳಿರುವ “comfortably” ಎಂದರೆ ನಾನು, ನನ್ನ ಹೆಂಡತಿ ಮತ್ತು ಮಗನ ತರ ಅವರ ಜೀವನ ಸಾಗುತ್ತಿತ್ತ ಎಂದರೆ ಸಾಕ್ಷಿಯು ನನ್ನ ಜೀವನದ ತರ ಅವರ ಬದುಕು ಇತ್ತೊ ಇಲ್ಲವೋ ನಾನು ಅವರ ಮನೆಗೆ ಹೋಗಿ ನೋಡಲು ಆಗುತ್ತದೆಯೇ ಎಂದು ನುಡಿಯುತ್ತಾರೆ. ಲಿಖಿತ ಹೇಳಿಕೆಯಲ್ಲಿ ವಾದಿ 1ರವರಿಗೆ 3 ನಿವೇಶನಗಳು ಸರ್ವೆ ನಂ 77ರಲ್ಲಿ ನೀಡಿರುತ್ತೇನೆ ಎಂದು ಹೇಳಿದ್ದು ಅದರ ದಾಖಲಾತಿಗಳನ್ನು ಲಿಖಿತ ಹೇಳಿಕೆಯೊಂದಿಗೆ ಯಾವ ಕಾರಣಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಹತ್ತಿರ ಆ ದಾಖಲೆಗಳು ಇರುವುದಿಲ್ಲ ಆದ್ದರಿಂದ ನಾನು ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 77ರಲ್ಲಿ 3 ನಿವೇಶನಗಳನ್ನು ವಾದಿ 1ರವರಿಗೆ ನೀಡಿರುವ ವಿಷಯ ಮತ್ತು ಅದರಲ್ಲಿ ಮನೆ ಕಟ್ಟಿ ವಾಸಮಾಡುತ್ತಿರುವ ವಿಷಯ ನನ್ನ ಹತ್ತಿರ ದಾಖಲಾತಿಗಳು ಇಲ್ಲದೇ ಇರುವ ಕಾರಣ ಸುಳ್ಳಾಗಿರುತ್ತದೆ ಎಂದರೆ ಸುಳ್ಳು ನನ್ನ ತಂದೆಯವರು ಅವರಿಗೆ ಕೊಟ್ಟಿರುವುದು ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ದಿನದವರೆಗೂ ಸರ್ವೆ ನಂ 77 ನನ್ನ ತಂದೆ, ನನ್ನ ತಾತ ಮತ್ತು ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಎಂದು ಹೇಳಲು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ವಾದಿ ನಂ 1ರವರಿಗೆ ಮನೆ ಕಟ್ಟಲು ಹಣ ನೀಡಿರುವುದಾಗಿ ಹೇಳಿದ್ದು ಅದಕ್ಕೆ ಸಂಬಂದ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ.

65. 1995ರಲ್ಲಿ 2ನೇ ವಾದಿಗೆ ಮದುವೆಯಾಗಿರುತ್ತದೆ ಎಂದು ನಾನು ಲಿಖಿತ ಹೇಳಿಕೆಯಲ್ಲಿ ಹೇಳಿದ್ದು ಅವರ ಮತ್ತು 1ನೇ ವಾದಿಯ ಮದುವೆಯ ಆಮಂತ್ರಣ ಪತ್ರ ನಮ್ಮ ವಕೀಲರಿಗೆ ಕೊಟ್ಟಿರತ್ತೇನೆಯೇ

ಎಂದರೆ ಇಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ವಾದಿ 2 ರವರು ಮನೆ ಕಟ್ಟಿಸುವಾಗ ಅವರಿಗೆ ರೂ. 20 ಲಕ್ಷ ಹಣವನ್ನು ನನ್ನ ತಂದೆಯವರು ನಗದು ಮತ್ತು ಚೆಕ್ಕಿನ ಮುಖಾಂತರ ನೀಡಿರುವುದಾಗಿ ನಾನು ಹೇಳಿದ್ದು ಅದನ್ನು ಬರೆಸುವಾಗ ನನ್ನ ವಕೀಲರಿಗೆ ನಾನು ಸದರಿ ದಾಖಲಾತಿಗಳನ್ನು ನೀಡಿರುತ್ತೇನೆಯೇ ಎಂದರೆ ಸಾಕ್ಷಿಯು ನನ್ನ ಹತ್ತಿರ ದಾಖಲಾತಿಗಳು ಇರುತ್ತದೆ ಆದರೆ ನನ್ನ ವಕೀಲರಿಗೆ ಅದನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿರುವ ನೂರಾರು ಅಸ್ಪಷ್ಟ ಸುಳ್ಳುಗಳ ಜೊತೆ ಈ ವಿಷಯವು ಒಂದಾಗಿರುತ್ತದೆ ಎಂದರೆ ಸುಳ್ಳು. ನಾನು ರೂ.10 ಲಕ್ಷದ ಚೆಕ್ಕನ್ನು ವಾದಿ 2 ರವರಿಗೆ ನೀಡಿರುವುದಾಗಿ ಲಿಖಿತ ಹೇಳಿಕೆಯಲ್ಲಿ ಹೇಳಿದ್ದು ಅದರ ಬಗ್ಗೆ ನನ್ನ ಹತ್ತಿರ ದಾಖಲಾತಿಗಳು ಇರುತ್ತದೆ. ನಾನು ಮೇಲೆ ಹೇಳಿದ ವಾದಿ 1 ಮತ್ತು 2 ರವರಿಗೆ ಸರ್ವೆ ನಂ 77 ರಲ್ಲಿ ನೀಡಿರುವ 3 ನಿವೇಶನಗಳು, ವಾದಿ 2 ರವರಿಗೆ ತುಮಕೂರಿನ ಗೂಳೂರು ಹೋಬಳಿಯ ಮಸ್ಕಲ್ ಗ್ರಾಮದಲ್ಲಿ ಮನೆ ಕಟ್ಟಲು ರೂ.20 ಲಕ್ಷ ಮತ್ತು 10 ಲಕ್ಷ ನಗದು ಹಣ ನೀಡಿರುವ ಬಗ್ಗೆ ನಿಡಿ 16 ವಿಭಾಗ ಪತ್ರದಲ್ಲಿ ಹೇಳಬಹುದಾಗಿತ್ತು ಅಲ್ಲವೇ ಎಂದರೆ ನಾನು ಹೇಳಿರುವುದಿಲ್ಲ ಎಂದು ಹೇಳಿ ಇನ್ನುಳಿದ ವಿವರಣೆಗಳನ್ನು ಸಾಕ್ಷಿ ನೀಡಿರುವುದಿಲ್ಲ. ನಾನು ನನ್ನ ಲಿಖಿತ ಹೇಳಿಕೆಯಲ್ಲಿ ವಾದಿ 1 ಮತ್ತು 2 ರವರಿಗೆ ಮೇಲ್ಕಂಡ ವಿವರಗಳ ವಿಷಯಗಳ ಬಗ್ಗೆ ಬರೆಸುವ ದುರುದ್ದೇಶ ಏನು ಇತ್ತು ಎಂದರೆ ಯಾವುದು ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸದರಿ ವಿಷಯಗಳು ಸುಳ್ಳಾಗಿದ್ದು ಅದರ ದಾಖಲಾತಿಗಳು ನನ್ನ ಹತ್ತಿರ ಇರದೇ ಇದ್ದರೂ ನಾನು ಅದನ್ನು ಬರೆಸಬಾರದಾಗಿತ್ತು ಎಂದರೆ ಸಾಕ್ಷಿಯು ನನ್ನ ಹತ್ತಿರ ಕೆಲವು ದಾಖಲಾತಿಗಳು ಇರುತ್ತದೆ ಅದನ್ನು ಕೊಡುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ವಕೀಲರಿಗೆ ದಾಖಲಾತಿಗಳನ್ನು ಕೊಟ್ಟು ಲಿಖಿತ ಹೇಳಿಕೆಯನ್ನು ಬರೆಸಿರುತ್ತೇನೆ ಎಂದು ಹೇಳಿದ ನಂತರ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸುವ ಪ್ರಮೇಯ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿ ನಾನು ದಾಖಲಾತಿಗಳನ್ನು ಕೊಡುತ್ತೇನೆ ಎಂದು ನುಡಿಯುತ್ತಾರೆ.

66. ನನ್ನ ಲಿಖಿತ ಹೇಳಿಕೆಯ 5 ನೇ ಪುಟದ 2 ನೇ ಖಂಡಿಕೆಯಲ್ಲಿ ವಾದಿ 1 ಮತ್ತು 2 ರವರು ನಿವೇಶನ ಮತ್ತು ಹಣ ಪಡೆದಿರುವುದರಿಂದ ವಿಭಾಗದಲ್ಲಿ ಏನು ಬೇಡ ಎನ್ನುವ ವಿಷಯವನ್ನು ನಾನು ಯಾವ ಆಧಾರದ ಮೇಲೆ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ವಾದಿ 1 ಮತ್ತು 2 ರವರು ಆ ರೀತಿಯಾಗಿ ಯಾವುದೇ ಬರವಣಿಗೆಯಲ್ಲಿ ನನಗೆ ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯ ನಿಡಿ 16 ವಿಭಾಗ ಪತ್ರ ಆಗುವ ಪೂರ್ವದ ವಿಷಯವನ್ನು ಬರೆಸಲಾಗಿರುತ್ತದೆ ಎಂದರೆ ಸರಿ. ಸದರಿ ವಿಷಯವನ್ನು ನಿಡಿ 16 ವಿಭಾಗ ಪತ್ರದಲ್ಲಿ ಬರೆಸಬಹುದಾಗಿತ್ತಲ್ಲವೇ ಎಂದರೆ ಬರೆಸಬಹುದಾಗಿತ್ತು ಎಂದು ನುಡಿಯುತ್ತಾರೆ.

67. ನನ್ನ ಲಿಖಿತ ಹೇಳಿಕೆಯಲ್ಲಿ ಎ ಷೆಡ್ಯೂಲ್ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಮತ್ತು ಬಿ ಷೆಡ್ಯೂಲ್ ನನ್ನ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ನಾವು ಮಾರಾಟ ಮಾಡಿರುವ ಆಸ್ತಿಗಳನ್ನು ಹೊರತುಪಡಿಸಿ ಯಾವ ಆಸ್ತಿಗಳು ಎ ಷೆಡ್ಯೂಲ್ ನಲ್ಲಿ ಉಳಿದಿರುತ್ತದೆಯೋ ಅದರಲ್ಲಿ ಮಾತ್ರ ವಿಭಾಗ ಪಡೆಯಲಿ ಮತ್ತು ಬಿ ಷೆಡ್ಯೂಲ್‌ನಲ್ಲಿ ವಾದಿಗಳಿಗೆ ಹಕ್ಕು ಇರುವುದಿಲ್ಲ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

68. ನಿಡಿ 16 ರ ಪ್ರಕಾರ ನನಗೂ ಮತ್ತು ನನ್ನ ತಂದೆಗೆ ಬಂದಿರುವ ಆಸ್ತಿಗಳು ಒಟ್ಟು ಕುಟುಂಬದ ಜಂಟಿ ಆಸ್ತಿಗಳು ಆಗಿರುತ್ತದೆ ಎಂದರೆ ಸರಿ.

69. ದಿನಾಂಕಃ 29-03-2003 ರಲ್ಲಿ ನಾನು ಮತ್ತು ನನ್ನ ತಂದೆ ಕ್ರಯಪತ್ರ ಸರ್ವೆ ನಂ 75 ರ ಜಮೀನಿಗೆ ಮಾಡಿಕೊಟ್ಟಿರುತ್ತೇವೆ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ನಾನು ಬರೆಸಿರುತ್ತೇನೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**